

ಯಾರೊಡನೆಯೂ ಹೇಳಿಕೊಳ್ಳಲಾಗದ ಲೈಂಗಿಕ, ದಾಂಪತ್ಯ ಮತ್ತು ಮಾನಸಿಕ ಸಮಸ್ಯೆಗಳಿಗೆ ಪರಿಹಾರಗಳನ್ನು ಸೂಚಿಸುವ ಅಂಕಣವಿದು. ನೀವೂ ನಿಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು.

**ಡಾ. ವಿನೋದ ಛೆಬ್ಬಿ**
ಲೈಂಗಿಕ, ದಾಂಪತ್ಯ ಮತ್ತು ಮನೋಚಿಕಿತ್ಸಕರು

ವಿವಾಹಿತ, ಸುಖೀ ಸಂಸಾರ. ನನ್ನ ಹೆಂಡತಿಗೆ ಪುರುಷ ವೈದ್ಯರು ಸಿಜೇರಿಯನ್ ಮಾಡಿದರು. ಆಪರೇಷನ್ ನಂತರ ತಾಯಿಮಗು ಆರಾಮವಾಗಿದ್ದರೂ ಪುರುಷ ವೈದ್ಯರು ಯೋನಿಯ ಒಳಗಡೆ ಎರಡು ಬೆರಳು ಹಾಕಿ ನೋಡುತ್ತಿದ್ದುದು ಹಿಂಸೆಯಾಯಿತು ಎಂದು ಪತ್ನಿ ತಿಳಿಸಿದಳು. ಡಾಕ್ಟರ್ ದೇವರು ಅಂತಾರೆ. ಆದರೂ ಈ ವಿಷಯ ಜ್ಞಾಪಕಕ್ಕೆ ಬಂದಾಗಲೆಲ್ಲ ಮನಸ್ಸಿಗೆ ಹಿಂಸೆ ಆಗುತ್ತದೆ. ಪವಿತ್ರತೆಗೆ ಅಡ್ಡಿ ಬರುತ್ತದೆ. ಎಲ್ಲಾ ಡಾಕ್ಟರ್ ಡೆಲಿವರಿ ಸಮಯದಲ್ಲಿ ಹೀಗೆ ಮಾಡುತ್ತಾರಾ? ಒಂದುವೇಳೆ ನನ್ನ ಹೆಂಡತಿ ಆಪರೇಶನ್ ನಂತರ ಸತ್ತುಹೋಗಿದ್ದರೆ ವೈದ್ಯರು ಏನು ಮಾಡುತ್ತಿದ್ದರು?

ವೈದ್ಯಕೀಯವಾಗಿ ಹೇಳುವುದಾದರೆ, ಸಿಜೇರಿಯನ್ ಮೂಲಕ ಮಗುವನ್ನು ಹೊರತೆಗೆದ ನಂತರ ಗರ್ಭಕೋಶದೊಳಗೆ ಆಗುತ್ತಿರುವ ರಕ್ತಸ್ರಾವ ನಿಂತಿದೆಯೆಂದು ಖಚಿತಗೊಳಿಸಲು ಯೋನಿಯ ಮೂಲಕ ಪರೀಕ್ಷಿಸಲಾಗುತ್ತದೆ. ಗರ್ಭಕೋಶವನ್ನು ಯೋನಿಯ ಮೂಲಕ ಪರೀಕ್ಷಿಸುವುದು ಅತ್ಯಂತ ಸುಲಭ ಹಾಗೂ ಸುರಕ್ಷಿತ ಕೂಡ. (ಅದು ಬಿಟ್ಟು ಉದರದ ಹೊಲಿಗೆ ಬಿಚ್ಚಿ ನೋಡಲು ಸಾಧ್ಯವಿಲ್ಲವಲ್ಲ?) ನಿಮ್ಮ ಹೆಂಡತಿಯನ್ನಷ್ಟೇ ಅಲ್ಲ, ಜಗತ್ತಿನೆಲ್ಲೆಡೆ ಯಾವುದೇ ಹೆಣ್ಣಿನ ಪರೀಕ್ಷೆಯನ್ನು ಪುರುಷ–ಸ್ತ್ರೀವೈದ್ಯ ಎಂಬ ಭೇದವಿಲ್ಲದೆ ಪ್ರತಿ ವೈದ್ಯರೂ ಹೀಗೆಯೇ ನಡೆಸುತ್ತಾರೆ. ಅಷ್ಟೇ ಅಲ್ಲ, ಶಸ್ತ್ರಚಿಕಿತ್ಸೆಯ ನಿರ್ಧಾರ ಕೈಗೊಳ್ಳುವ ಮುಂಚೆ ಯೋನಿಪರೀಕ್ಷೆಯನ್ನು ಹಲವಾರು ಸಲ ಮಾಡಿರುತ್ತಾರೆ. ಇದೆಲ್ಲವನ್ನೂ ರೋಗಿಯ ಹಿತಚಿಂತನೆಗಾಗಿಯೇ ಮಾಡಲಾಗುತ್ತದೆ. ಆದರೆ ನಿಮ್ಮ ಸಮಸ್ಯೆ ಅದಲ್ಲ; ನಿಮಗಾಗಿ ಮೀಸಲಿಟ್ಟ ನಿಮ್ಮ ಹೆಂಡತಿಯ ಯೋನಿಯೊಳಗೆ ಪರಪುರುಷನೊಬ್ಬನ ಕೈಬೆರಳು ಹೊಕ್ಕ ವಿಚಾರವೇ ನಿಮ್ಮನ್ನು ಹಿಂಸಿಸುತ್ತಿದೆ. (ಸ್ತ್ರೀ ಪರೀಕ್ಷಿಸಿದ್ದರೆ ಈ ಪ್ರಶ್ನೆ ಏಳುತ್ತಲೇ ಇರಲಿಲ್ಲ!) ನೀವಿಲ್ಲಿ ಹೇಗೆ ಅಂದುಕೊಳ್ಳುತ್ತಿದ್ದೀರಿ ಎನ್ನುವುದು ನಿಮ್ಮ ತಲೆ ತಿನ್ನುತ್ತಿದೆಯೇ ವಿನಾ ವೈದ್ಯರೇನು ಮಾಡಿದರು ಎನ್ನುವುದಲ್ಲ. ಇನ್ನು, ಸಮಸ್ಯೆಯ ಪರಿಹಾರಕ್ಕಾಗಿ ನಿಮ್ಮನ್ನೇ ನೀವು ಉದ್ದೇಶಿಸಿ ಹೀಗೆ ಯೋಚಿಸಿ: 'ಪುರುಷ ವೈದ್ಯರು ಶಸ್ತ್ರಚಿಕಿತ್ಸೆ ಮಾಡುವಾಗ ಅಥವಾ ಮಗುವನ್ನು ಹೊರತೆಗೆಯುವಾಗ ಆಗದಿದ್ದ ಹಿಂಸೆಯು ಶಸ್ತ್ರಚಿಕಿತ್ಸೆಯಿಂದಾಗುವ ಸಂಭವನೀಯ ಅಪಾಯಗಳ ಬಗೆಗೆ ಪರೀಕ್ಷಿಸುವಾಗ ಯಾಕೆ ಇಣುಕಿತು? ಒಂದು ವೇಳೆ ವೈದ್ಯರ ಲಿಂಗಭೇದವು ನನಗೆ ಮುಖ್ಯವಾಗಿದ್ದರೆ ಶಸ್ತ್ರಚಿಕಿತ್ಸೆಯ ಒಪ್ಪಿಗೆ ಪತ್ರಕ್ಕೆ ನಾನು ಸಹಿ ಮಾಡಬಾರದಾಗಿತ್ತಲ್ಲವೆ?' ಒಬ್ಬ ಪುರುಷ ವೈದ್ಯರಿಂದ ಶಸ್ತ್ರಚಿಕಿತ್ಸೆಗೆ ಒಪ್ಪಿ, ಇಂಥ ಪರೀಕ್ಷೆಯ ನಂತರವೇ ತಾನೇ ತೃಪ್ತಿಕರ ಪರಿಣಾಮವಾಗಿರುವುದು? ನಾವಿಬ್ಬರೂ ಆರೋಗ್ಯವಂತ ಮಗುವಿನ ತಾಯ್ತಂದೆಯರಾಗಿರುವುದು ಈ ಪುರುಷ ವೈದ್ಯರು ನಮಗೆ ಸಲ್ಲಿಸಿದ ಸೇವೆಯ ಒಟ್ಟು ಫಲವಲ್ಲವೆ? ಒಂದು ವೇಳೆ ಯೋನಿಪರೀಕ್ಷೆ ಮಾಡುವುದಕ್ಕೆ ಹಿಂದೇಟುಹಾಕಿ, ಅದರ ಪರಿಣಾಮವಾಗಿ ಗರ್ಭಕೋಶದಲ್ಲಿ ರಕ್ತಸ್ರಾವವಾಗಿ ಹೆಂಡತಿ ತೀರಿಹೋದರೆ ವೈದ್ಯರು ಏನು ಮಾಡುತ್ತಿದ್ದರು ಎನ್ನುವುದಿರಲಿ– ನನ್ನ ಗತಿ ಏನಾಗುತ್ತಿತ್ತು? ಹೀಗೆಲ್ಲ ಯೋಚಿಸಿದಾಗ ವೈದ್ಯರು ಮಾಡಿದುದು ಸೂಕ್ತ ಎಂಬ ನಂಬಿಕೆ ಬರುತ್ತದೆ. ಇಷ್ಟಕ್ಕೂ ನಿಮ್ಮ ಅನಿಸಿಕೆಯು ತಲೆ ತಿನ್ನುತ್ತಿದ್ದಲ್ಲಿ ವೈಯಕ್ತಿಕವಾಗಿ ಮನೋಚಿಕಿತ್ಸಕರನ್ನು ಸಂಪರ್ಕಿಸಿ. ಇಲ್ಲಿ ವೈದ್ಯರಿಗೂ ಒಂದು ಕಿವಿಮಾತು: ಪರೀಕ್ಷೆಗೆ ಕೈಹಾಕುವ ಮುಂಚೆ ಪರೀಕ್ಷೆಯ ವಿವರಗಳನ್ನು ರೋಗಿಗಳಿಗೆ ತಿಳಿಸಿ, ಅವರಿಗೆ ಪೂರ್ಣ ಅರ್ಥವಾದ ನಂತರವೇ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿಸಿಕೊಳ್ಳುವುದು ಸೂಕ್ತ!

ವಿವಾಹಿತೆ, 27 ವರ್ಷ, ಮಕ್ಕಳಿವೆ. 15ವರ್ಷದಿಂದ ಬಿಳಿಸೆರಗು ಹೋಗುವುದು ಹೆಚ್ಚಾಗಿರುತ್ತದೆ. ಕೆಲವು ಡಾಕ್ಟರರ ಸಲಹೆಯಂತೆ ಔಷಧಿ ತೆಗೆದುಕೊಂಡರೂ ನಿಂತಿಲ್ಲ. ತುಂಬ ಸಣ್ಣಗಾಗಿದ್ದೇನೆ. ಕೈಕಾಲು ನೋವು, ಸಂಕಟ, ಸುಸ್ತು ಹೆಚ್ಚಾಗಿರುತ್ತದೆ. ಯಾರೋ ಹಿರಿಯರು ಗರ್ಭಕೋಶ ತೆಗೆಸಿದರೆ ಸರಿಹೋಗುತ್ತದೆ ಎಂದಿದ್ದಾರೆ. ಗರ್ಭಕೋಶ ತೆಗೆಸಬಹುದೆ? ಇದರಿಂದ ದಾಂಪತ್ಯ ಜೀವನಕ್ಕೆ ತೊಂದರೆಯಾಗಬಹುದೆ?

ಬಿಳಿಮುಟ್ಟು ಭೀಕರ ಕಾಯಿಲೆ ಎಂದುಕೊಂಡು ಕೊರಗುತ್ತಿದ್ದೀರಿ ಎಂದೆನಿಸುತ್ತದೆ. ವಾಸ್ತವವೇನೆಂದರೆ ಪ್ರತಿ ಸ್ತ್ರೀಯೂ ತನ್ನ ಜೀವನದಲ್ಲಿ ಕೆಲವು ಸಲ ಬಿಳಿಮುಟ್ಟನ್ನು ಅನುಭವಿಸಿಯೇ ಇರುತ್ತಾಳೆ! ಬಿಳಿಮುಟ್ಟಿನ ಬಗೆಗೆ ಹೆಚ್ಚಿನ ಮಾಹಿತಿ ಇಲ್ಲಿದೆ: 1) ಅನೇಕರಿಗೆ ಹಗಲು ಕಾಮೋದ್ರೇಕವಾಗಿ ಯೋನಿ ಒದ್ದೆಯಾಗುವುದರಿಂದ ಇದನ್ನೇ ಬಿಳಿಮುಟ್ಟು ಎಂದು ಭ್ರಮಿಸುವ ಸಂಭವವಿದೆ. 2) ಮುಟ್ಟಿನ ದಿನ ಹತ್ತಿರವಾದಾಗ ಕಾಣಿಸಿಕೊಂಡು ಮುಟ್ಟು ನಿಂತ ತಕ್ಷಣ ಮಾಯವಾಗುವ ಬಿಳಿಮುಟ್ಟು ಹಾರ್ಮೋನುಗಳ ಏರಿಳಿತದಿಂದ ಉಂಟಾಗುತ್ತದೆ. ಇದು ಸಹಜವಾದುದರಿಂದ ಚಿಕಿತ್ಸೆಯ ಅಗತ್ಯವಿಲ್ಲ. 3) ಯೋನಿಮಾರ್ಗಕ್ಕೂ ಗುದದ್ವಾರಕ್ಕೂ ಇರುವ ಅಂತರ ಕಡಿಮೆ. ಗುದದ್ವಾರವನ್ನು ತೊಳೆದುಕೊಳ್ಳುವಾಗ ನೀರಿನ ಮೂಲಕ ಸೋಂಕು ಜನನಾಂಗಕ್ಕೆ ತಾಗುವುದರಿಂದ ಬಿಳಿಮುಟ್ಟು ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತದೆ. ಇದು ವೈದ್ಯಕೀಯ ಚಿಕಿತ್ಸೆಯಿಂದ ಗುಣವಾಗುತ್ತದೆ; ಗುಣವಾಗದಿದ್ದರೂ ಇದನ್ನು ವರ್ಷಗಟ್ಟಲೆ ಅನುಭವಿಸುತ್ತ ಹಾಯಾಗಿರುವ ಅನೇಕ ಸ್ತ್ರೀಯರು ಇದ್ದಾರೆ. 4) ಬಹಳ ಅಪರೂಪಕ್ಕೆ ಇದು ಗರ್ಭಕೋಶದ ಕ್ಯಾನ್ಸರ್‌ನ ಲಕ್ಷಣವಾಗಿರಬಹುದು. ಇನ್ನು ಚಿಕಿತ್ಸೆ: 1. ಶೌಚದ ನಂತರ ಜನನಾಂಗಕ್ಕೆ ತಾಗದಂತೆ ಗುದದ್ವಾರವನ್ನು ಹಿಂದಿನಿಂದ ಕೈಹಾಕಿ ತೊಳೆದುಕೊಳ್ಳುವ ರೂಢಿ ಮಾಡಿಕೊಳ್ಳಿ; ನಂತರ ಸಾಬೂನಿನಿಂದ ಆ ಜಾಗ ಪೂರ್ತಿ ತೊಳೆದುಕೊಳ್ಳಿ. 2. ಕಾಯಿಲೆ ಗುಣವಾಗಲು ಹೊಣೆಗಾರಿಕೆ ಹೊರುವಂತಹ ಒಬ್ಬರೇ ನುರಿತ ವೈದ್ಯರನ್ನು ಮತ್ತೆ ಮತ್ತೆ ಸಂದರ್ಶಿಸಿದರೆ ಸಾಕು. 3. ಪ್ಯಾಪ್ ಸ್ಮಿಯರ್ ಎಂಬ ಪರೀಕ್ಷೆಯಿಂದ ಗರ್ಭಕೋಶದ ಕ್ಯಾನ್ಸರ್‌ಅನ್ನು ಏಳು ವರ್ಷ ಮುಂಚೆಯೇ ಕಂಡುಹಿಡಿದು ಗುಣಪಡಿಸಬಹುದು. (ಆಗ ಚಿಕಿತ್ಸೆಯ ಕ್ರಮವಾಗಿ ಬಹುಶಃ ಗರ್ಭಕೋಶವನ್ನು ತೆಗೆದುಹಾಕಬಹುದು.) 4. ಗರ್ಭಕೋಶವನ್ನು ತೆಗೆದುಹಾಕಿದರೆ ಯೋನಿಮಾರ್ಗ ಹಾಗೆಯೇ ಉಳಿಯುವುದರಿಂದ ಸಂಭೋಗಕ್ಕೇನೂ ತೊಂದರೆಯಿಲ್ಲ. ಕ್ಯಾನ್ಸರ್ ಅಥವಾ ಜನನಾಂಗದ ಕ್ಷಯ ಇಲ್ಲದಿದ್ದರೆ ಬಿಳಿಮುಟ್ಟಿನಿಂದ ತೂಕದ ಇಳಿತ ಅಥವಾ ಇತರ ಲಕ್ಷಣಗಳು ಉಂಟಾಗಲು ಸಾಧ್ಯವಿಲ್ಲ. ಆದುದರಿಂದ ಮೊದಲು ಸ್ತ್ರೀರೋಗ ತಜ್ಞರನ್ನು ಕೂಡಲೇ ಭೇಟಿಮಾಡಿ, ಅವರು ಹೇಳಿದಂತೆ ಚಿಕಿತ್ಸೆ ಪಡೆಯಿರಿ. ಸಮಸ್ಯೆ ಗಂಭೀರವಾಗಿಲ್ಲವೆಂಬ ಭರವಸೆ ಪಡೆದ ನಂತರ, ಇದೊಂದು ಸ್ತ್ರೀಸಹಜವಾದ ನಿರಪಾಯಕರ ಬಿಳಿಮುಟ್ಟು! ಎಂದುಕೊಂಡು ನಿರಾತಂಕವಾಗಿರಿ!

ಗಂಡಸು, (ವಯಸ್ಸು ತಿಳಿಸಿಲ್ಲ). ಚಿಕ್ಕವನಿದ್ದಾಗ ಆಕಸ್ಮಿಕವಾಗಿ ನನ್ನ ಎರಡೂ ವೃಷಣಗಳನ್ನು ಕಳೆದುಕೊಂಡೆ. ಇದರಿಂದ ಮುಂದೆ ವಿವಾಹ ಮತ್ತು ಮಕ್ಕಳಾಗಬಹುದೆ?

ವೃಷಣ ಬೀಜಗಳು ವೀರ್ಯಾಣುಗಳನ್ನೂ, ಟೆಸ್ಟೋಸ್ಟೆರೋನ್ ಎಂಬ ಗಂಡು ಹಾರ್ಮೋನಿನ ಹೆಚ್ಚಿನಾಂಶವನ್ನೂ ಉತ್ಪತ್ತಿ ಮಾಡುತ್ತವೆ. ಎರಡೂ ಬೀಜಗಳು ಇಲ್ಲದಿರುವಾಗ ವೀರ್ಯಾಣುಗಳ ಉತ್ಪತ್ತಿ ನಿಲ್ಲುವುದರಿಂದ ಮಕ್ಕಳಾಗುವುದು ಸಾಧ್ಯವಿಲ್ಲ. ಆದರೆ ಟೆಸ್ಟೋಸ್ಟೆರೋನಿನ ಸ್ವಲ್ಪ ಅಂಶವು ಅಡ್ರೆನಾಲಿನ್ ಎಂಬ ಗ್ರಂಥಿಯಿಂದಲೂ ಹುಟ್ಟುವುದರಿಂದ ಕಾಮಾಸಕ್ತಿಗೆ ಅಷ್ಟೇನೂ ಕೊರತೆ ಆಗಲಾರದು. ಒಂದು ವೇಳೆ ಕಾಮಾಸಕ್ತಿ ಕಡಿಮೆಯಾದರೆ ಟೆಸ್ಟೋಸ್ಟೆರೋನ್ ಹಾರ್ಮೋನನ್ನು ವೈದ್ಯರ ಸಲಹೆಯ ಮೇರೆಗೆ ಆಗಾಗ ತೆಗೆದುಕೊಳ್ಳುತ್ತಿರಬೇಕು. ಇದರಿಂದ ಕಾಮಾಸಕ್ತಿ, ದೇಹದಾರ್ಢ್ಯ, ಗಡ್ಡಮೀಸೆ ಇತ್ಯಾದಿ ಸರಿಯಾಗಿರುತ್ತವೆ. ಆಗ ಮದುವೆಯಾಗಿ ದಾಂಪತ್ಯ ಸುಖ ಅನುಭವಿಸಬಹುದು. ಮಕ್ಕಳು ಬೇಕಾದರೆ ವೀರ್ಯ ಬ್ಯಾಂಕಿನಲ್ಲಿ ದೊರಕುವ ಸಂಸ್ಕರಿತ ವೀರ್ಯದ ಮೂಲಕ ಪಡೆಯಬಹುದು. ಒಂದು ಮಾತು: ದಾಂಪತ್ಯಕ್ಕೆ ಲೈಂಗಿಕ ಸಾಮರ್ಥ್ಯ ಅಗತ್ಯವೇ ಹೊರತು ಸಂತಾನೋತ್ಪತ್ತಿಯ ಸಾಮರ್ಥ್ಯ ಅಲ್ಲ. ಸಂತಾನೋತ್ಪತ್ತಿ ಮುಖ್ಯವಾಗಿದ್ದರೆ ಮಕ್ಕಳಾದ ಮೇಲೆಯೇ ಮದುವೆಯಾಗುವ ಪದ್ಧತಿ ಜಾರಿಯಲ್ಲಿ ಇರುತ್ತಿತ್ತು!

ಲೈಂಗಿಕ ಸಹಾಯವಾಣಿ: ಲೈಂಗಿಕ ಸಮಸ್ಯೆಗಳ ತುರ್ತು ಪರಿಹಾರಕ್ಕಾಗಿ ಡಾ. ವಿನೋದ ಛೆಬ್ಬಿಯವರನ್ನು ಪ್ರತಿ ಮಂಗಳವಾರ ಮತ್ತು ಶುಕ್ರವಾರ ಮಧ್ಯಾಹ್ನ 2ರಿಂದ 4ರ ತನಕ ಬೆಂಗಳೂರಿನ ದೂರವಾಣಿ; (080) 23111666 ಅಥವಾ 23101205ರ ಮೂಲಕ ಸಂಪರ್ಕಿಸಬಹುದು. ದೂರವಾಣಿ ಸಿಗದಿದ್ದಲ್ಲಿ ಪತ್ರದ ಮೂಲಕ ತಮ್ಮ ಮೊಬೈಲ್ ಸಂಖ್ಯೆಯನ್ನು ತಿಳಿಸಿ ವೈದ್ಯರ ಉತ್ತರಕ್ಕಾಗಿ ಕಾಯಬಹುದು. ಅಥವಾ www.medisex.org ಪರಿಶೀಲಿಸಬಹುದು.

**ನಿಮ್ಮ ಪ್ರಶ್ನೆಗಳನ್ನು ಸಂಪಾದಕರು, 'ಸುಧಾ' 'ಸುಖೀಭವ' ವಿಭಾಗ, ನಂ. 75 ಎಂ.ಜಿ. ರಸ್ತೆ, ಬೆಂಗಳೂರು-01 ವಿಳಾಸಕ್ಕೆ ಕಳುಹಿಸಿ**